# ಕುವೆಂಪು ವಿಶ್ವವಿದ್ಯಾಲಯ

**ಪ್ರೊ. ನೆಲ್ಲಿಕಟ್ಟೆ ಎಸ್. ಸಿದ್ದೇಶ್**

ಅಧ್ಯಕ್ಷರು, ಸ್ನಾತಕ ಕನ್ನಡ ಅಧ್ಯಯನ ಮಂಡಳಿ
ಕನ್ನಡ ಭಾರತಿ, ಜ್ಞಾನಸಹ್ಯಾದ್ರಿ , ಶಂಕರಘಟ್ಟ-577 451
ಮೊಬೈಲ್ ನಂ :9481416989

---

ಸಂಖ್ಯೆ :ಕುವಿ:ಕಭಾ:579:2025-26 ದಿನಾಂಕ:23-01-2026

## ಸ್ನಾತಕ ಕನ್ನಡ ಅಧ್ಯಯನ ಮಂಡಳಿ ಸಭೆಯ ನಡಾವಳಿಗಳು

ದಿನಾಂಕ:23-01-2026ರ ಶುಕ್ರವಾರ ಬೆಳಗ್ಗೆ 10.00 ಗಂಟೆಗೆ ಮಂಡಳಿಯ ಅಧ್ಯಕ್ಷರಾದ ಪ್ರೊ. ನೆಲ್ಲಿಕಟ್ಟೆ ಎಸ್.ಸಿದ್ದೇಶ್ ಅವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು.

**ಸಭೆಗೆ ಹಾಜರಾದ ಸದಸ್ಯರು:**

01) ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್ – ಅಧ್ಯಕ್ಷರು
02) ಡಾ. ಎ.ಬಿ. ಉಮೇಶ್ – ಸದಸ್ಯರು
03) ಡಾ. ಕೃಷ್ಣಪ್ಪ ಜಿ. ಚವ್ಹಾಣ್ – ಸದಸ್ಯರು
04) ಡಾ. ಎಚ್.ಎಸ್. ವಿರೂಪಾಕ್ಷ – ಸದಸ್ಯರು
05) ಡಾ. ಮಹಾದೇವ ಬಿ.ಪಿ., – ಸದಸ್ಯರು

**ಗೈರು ಹಾಜರಿದ್ದ ಸದಸ್ಯರು:**

01) ಡಾ. ಪುಷ್ಪಭಾರತಿ ಆರ್.ಎ – ಸದಸ್ಯರು
02) ಡಾ. ಮೂಡಲಗಿರಿಯಯ್ಯ. – ಸದಸ್ಯರು

ಅಧ್ಯಕ್ಷರು ಸ್ನಾತಕ ಅಧ್ಯಯನ ಮಂಡಳಿ ಇವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ವಿಷಯವನ್ನು ಪ್ರಾರಂಭಿಸಿದರು. ಸಭೆಯಲ್ಲಿ ಕೈಗೊಂಡ ನಿರ್ಣಯಗಳು ಈ ಕೆಳಗಿನಂತಿವೆ.

ವಿಷಯ:01– SEC- ಕೌಶಲಾಭಿವೃದ್ಧಿ ಪತ್ರಿಕೆಯ ಸ್ವರೂಪ–ವ್ಯಾಪ್ತಿ–ಅಂಕಗಳು–ಬೋಧನಾವಧಿ ಬಗ್ಗೆ

ನಿರ್ಣಯ: ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಈ ಪತ್ರಿಕೆಯು 4ನೇ ಸೆಮಿಸ್ಟರ್‌ಗೆ ನಿಗದಿಯಾಗಬೇಕು. ಆದರೆ ಈ ಪತ್ರಿಕೆಯನ್ನು ಯಾರು ಆಯ್ಕೆ ಮಾಡಬೇಕು (ಐಚ್ಛಿಕ ಕನ್ನಡದ ವಿದ್ಯಾರ್ಥಿಗಳಾ? ಅಥವಾ ಯಾವುದೇ ಕೋರ್ಸ್‌ನ ವಿದ್ಯಾರ್ಥಿಗಳಾ?) ಎಂಬುದರ ಬಗ್ಗೆ ವಿಶ್ವವಿದ್ಯಾಲಯದಿಂದ ಸ್ಪಷ್ಟೀಕರಣ ಪಡೆಯುವ ಜವಾಬ್ದಾರಿಯನ್ನು ಮಂಡಳಿಯ ಅಧ್ಯಕ್ಷರಿಗೆ ನೀಡಲಾಯಿತು. ಉಳಿದಂತೆ ನಿಯಮಾನುಸಾರ ಈ ಪತ್ರಿಕೆಯು ವಾರಕ್ಕೆ ಎರಡು ಗಂಟೆಗಳ ಬೋಧನಾ ಅವಧಿ ಹೊಂದಿರುತ್ತದೆ. ಒಟ್ಟು ಗರಿಷ್ಠ ಅಂಕಗಳು –50 ಎಂಬುದಾಗಿ ಸಭೆಯು ಅನುಮೋದಿಸಿತು.

ವಿಷಯ:02– SEC- ಪತ್ರಿಕೆಯ ಪಠ್ಯಕ್ರಮ ನಿಗದಿ ಹಾಗೂ ಪಠ್ಯಗಳ ತಯಾರಿಯ ಜವಾಬ್ದಾರಿಯನ್ನು ಹಂಚಿಕೆ ಮಾಡುವ ಬಗ್ಗೆ.

ನಿರ್ಣಯ: ಪತ್ರಿಕೆಯ ಪಠ್ಯಕ್ರಮವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಯಿತು.

ಕೌಶಲ್ಯಾಭಿವೃದ್ಧಿ ಪತ್ರಿಕೆ (ಕನ್ನಡಭಾಷೆ & ಸಾಹಿತ್ಯ)

ಬೋಧನಾವಧಿ– ವಾರಕ್ಕೆ 02 ಗಂಟೆ; ಗರಿಷ್ಠ ಅಂಕಗಳು–50

**ವಿಷಯ-2 ಕೌಶಲ್ಯ ಕನ್ನಡ-1 (ನಾಲ್ಕನೇ ಸೆಮ್) ಪಠ್ಯಕ್ರಮ ನಿಗಧಿ ಹಾಗೂ ಓದಿನ ಸಾಮಾಗ್ರಿಯನ್ನು ಸಿದ್ಧಪಡಿಸಿಕೊಡುವ ಬಗ್ಗೆ**

**ನಿರ್ಣಯ :** ಈ ಬಗ್ಗೆ ಸಭೆಯು ಸುದೀರ್ಘವಾಗಿ ಚರ್ಚಿಸಿ ಅಂತಿಮವಾಗಿ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

**ನಿಗಧಿಪಡಿಸಿದ ಪಠ್ಯಕ್ರಮ :**

ಘಟಕ-01: ಕನ್ನಡದ ಆತಂಕಗಳು ಮತ್ತು ಅವಕಾಶಗಳು

ಘಟಕ-02: ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ- ಅಧ್ಯಯನದ ಮಾದರಿ ಮತ್ತು ಆಕರಗಳು

ಘಟಕ-03: ಪತ್ರಲೇಖನ, ಪ್ರಬಂಧ ರಚನೆ, ಬರವಣಿಗೆಯ ಕೌಶಲ್ಯಗಳು, ಸಂದರ್ಶನದ ಕೌಶಲ್ಯಗಳು

ಘಟಕ-04: ವಿಚಾರ ಸಂಕಿರಣ, ಕಾರ್ಯಕ್ರಮ ಸಂಯೋಜನೆ, ಮಾತಿನ ಕೌಶಲ್ಯಗಳು, ನಿರೂಪಣೆಯ ಕೌಶಲ್ಯಗಳು

ಘಟಕ-05: ಕೃತಕ ಬುದ್ಧಿಮತ್ತೆ ಮತ್ತು ಕನ್ನಡ ಪರಿಸರ

ಮೇಲ್ಕಂಡ ಐದು ಘಟಕಗಳಿಗೆ ತಲಾ 10 ಅಂಕಗಳನ್ನು ನಿಗದಿಪಡಿಸಲಾಯಿತು

ಬೋಧನಾವಧಿ-ವಾರಕ್ಕೆ 02 ಗಂಟೆ; ಗರಿಷ್ಠ ಅಂಕಗಳು-50

ಈ ಘಟಕಗಳ ಪಠ್ಯ ರಚನೆಯ ಜವಾಬ್ದಾರಿಯನ್ನು ಎಲ್ಲಾ ಅಧ್ಯಯನ ಮಂಡಳಿಯ ಸದಸ್ಯರಿಗೆ ಈ ಕೆಳಕಂಡಂತೆ ಹಂಚಿಕೆ ಮಾಡಲಾಯಿತು.

ಡಾ. ಮೂಡಲಗಿರಿಯಯ್ಯ- ಘಟಕ-01
ಡಾ. ಹೆಚ್.ಎಸ್.ವಿರೂಪಾಕ್ಷಪ್ಪ- ಘಟಕ-02
ಪ್ರೊ. ಬಿ.ಪಿ.ಮಹಾದೇವ- ಘಟಕ-03
ಡಾ. ಪುಷ್ಪ ಭಾರತಿ- ಘಟಕ-04
ಡಾ. ಎ.ಬಿ. ಉಮೇಶ- ಘಟಕ-05

**ವಿಷಯ-3 ಕೌಶಲ್ಯ ಕನ್ನಡ-2 (ಐದನೇ ಸೆಮ್) ಪಠ್ಯಕ್ರಮ ನಿಗಧಿ ಹಾಗೂ ಓದಿನ ಸಾಮಾಗ್ರಿಯನ್ನು ಸಿದ್ಧಪಡಿಸಿಕೊಡುವ ಬಗ್ಗೆ**

**ನಿರ್ಣಯ :** ಈ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಅಂತಿಮವಾಗಿ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

ಘಟಕ-01: ಕನ್ನಡ ಭಾಷೆಯ ಜಾಯಮಾನ

ಘಟಕ-02: ಕನ್ನಡ ಧ್ವನಿಮಾ ವ್ಯವಸ್ಥೆ

ಘಟಕ-03: ವಾಣಿಜ್ಯ ಕನ್ನಡ

ಘಟಕ-04: ಕಂಪ್ಯೂಟರ್ ಕನ್ನಡ

ಘಟಕ-05: ಆಡಳಿತ ಕನ್ನಡ

ಮೇಲ್ಕಂಡ ಐದು ಘಟಕಗಳಿಗೆ ತಲಾ 10 ಅಂಕಗಳನ್ನು ನಿಗದಿಪಡಿಸಲಾಯಿತು

(ಬೋಧನಾವಧಿ- ವಾರಕ್ಕೆ 02 ಗಂಟೆ; ಗರಿಷ್ಠ ಅಂಕಗಳು-50)

ಈ ಪಠ್ಯಗಳನ್ನು ಸಿದ್ಧಪಡಿಸಿಕೊಡುವ ಜವಾಬ್ದಾರಿಯನ್ನು ಅಧ್ಯಯನಮಂಡಳಿಯ ಸದಸ್ಯರಿಗೆ ವಹಿಸಲಾಯಿತು.

ವಿಷಯ–4 ಬಿ.ಎ ಕನ್ನಡ ಐಚ್ಛಿಕ ವಿಷಯದ ಪಠ್ಯಕ್ರಮ ರೂಪಿಸುವ ಬಗ್ಗೆ

ನಿರ್ಣಯ : ಬಿ.ಎ ಐದನೇ ಸೆಮಿಸ್ಟರ್ ಹಾಗೂ ಆರನೇ ಸೆಮಿಸ್ಟರ್‌ಗಳಿಗೆ ತಲಾ ಎರಡೆರಡು ಪತ್ರಿಕೆಗಳಂತೆ ಒಟ್ಟು ನಾಲ್ಕು ಪಠ್ಯಗಳನ್ನು ನಿಗಧಿಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಅದರಂತೆ ಪಠ್ಯಗಳನ್ನು ಕೂಡ ಸೂಚಿಸಲಾಯಿತು

**ಕನ್ನಡ ಐಚ್ಛಿಕ 5ನೇ ಸೆಮಿಸ್ಟರ್**

**ಪತ್ರಿಕೆ–5** ಕಾವ್ಯಮೀಮಾಂಸೆ : ಭಾರತೀಯ ಮತ್ತು ಪಾಶ್ಚಾತ್ಯ ತತ್ವಗಳು
**ಪತ್ರಿಕೆ–6** ಹಳೆಗನ್ನಡ ಪಠ್ಯ (ಗದಾಯುದ್ಧ ಸಂಗ್ರಹ)

**ಕನ್ನಡ ಐಚ್ಛಿಕ 6ನೇ ಸೆಮಿಸ್ಟರ್**

**ಪತ್ರಿಕೆ–7** ಕನ್ನಡ ಭಾಷಾ ಚರಿತ್ರೆ–ಛಂದಸ್ಸು
**ಪತ್ರಿಕೆ–8** ವಿಮರ್ಶೆ ತತ್ವಗಳು ಮತ್ತು ಅನ್ವಯಿಕತೆ

ಮೇಲಿನ ಎಲ್ಲಾ ಪತ್ರಿಕೆಗಳ ಅಂಕಗಳು ಹಾಗೂ ಬೋಧನಾ ಅವಧಿ ಮತ್ತು ಪ್ರಶ್ನೆ ಪತ್ರಿಕೆಗಳ ಮಾದರಿಯು ಹಿಂದಿನ ಸೆಮಿಸ್ಟರ್‌ಗಳಂತೆಯೇ ಮುಂದುವರೆಯುತ್ತದೆ. ಹಾಗೂ ಈ ಮೆಲ್ಕಂಡ ಪಠ್ಯಗಳ ತಯಾರಿಯ ಬಗ್ಗೆ ಅಧ್ಯಯನ ಮಂಡಳಿಯ ಸದಸ್ಯರು ಹಾಗೂ ಇಚ್ಛೆಯುಳ್ಳ ಅಧ್ಯಾಪಕರು ಸೇರಿ ನಿಗಧಿಗೊಳಿಸಬೇಕಾದ ಪಠ್ಯಗಳನ್ನು ತುರ್ತಾಗಿ ಸಿದ್ಧಪಡಿಸಿಕೊಂಡು ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.

ಅಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಲು ಯಾವುದೇ ಇಲ್ಲದೆ ಇರುವುದರಿಂದ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಸ್ನಾತಕ ಕನ್ನಡ ಅಧ್ಯಯನ ಮಂಡಳಿ

ಅಧ್ಯಕ್ಷರು
ಕನ್ನಡ ಭಾರತಿ
ಸ್ನಾತಕ [illegible] ಅಧ್ಯಯನ ಮಂಡಳಿ
ಕುವೆಂಪು ವಿಶ್ವವಿದ್ಯಾಲಯ,
ಶಂಕರಘಟ್ಟ - 577 451

# ಕನ್ನಡ ಭಾರತಿ
# ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ

## ಕನ್ನಡ ಭಾಷೆ ಮತ್ತು ಐಚ್ಛಿಕ ವಿಷಯಗಳ ಪಠ್ಯಕ್ರಮ

### ಕೌಶಲ್ಯ ಕನ್ನಡ–1 (ನಾಲ್ಕನೇ ಸೆಮಿಸ್ಟರ್ ನ ಕನ್ನಡ ಐಚ್ಛಿಕ ವಿದ್ಯಾರ್ಥಿಗಳಿಗೆ)

**ಅಂಕಗಳು : 50** **ಬೋಧನಾ ಅವಧಿ– 02 ವಾರಕ್ಕೆ**

ಘಟಕ–01: ಕನ್ನಡದ ಆತಂಕಗಳು ಮತ್ತು ಅವಕಾಶಗಳು

ಘಟಕ–02: ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ– ಅಧ್ಯಯನದ ಮಾದರಿ ಮತ್ತು ಆಕರಗಳು

ಘಟಕ–03: ಪತ್ರಲೇಖನ, ಪ್ರಬಂಧ ರಚನೆ, ಬರವಣಿಗೆಯ ಕೌಶಲ್ಯಗಳು, ಸಂದರ್ಶನದ ಕೌಶಲ್ಯಗಳು

ಘಟಕ–04: ವಿಚಾರ ಸಂಕಿರಣ, ಕಾರ್ಯಕ್ರಮ ಸಂಯೋಜನೆ, ಮಾತಿನ ಕೌಶಲ್ಯಗಳು, ನಿರೂಪಣೆಯ ಕೌಶಲ್ಯಗಳು

ಘಟಕ–05: ಕೃತಕ ಬುದ್ಧಿಮತ್ತೆ ಮತ್ತು ಕನ್ನಡ ಪರಿಸರ

### ಕೌಶಲ್ಯ ಕನ್ನಡ–2 (ಐದನೇ ಸೆಮಿಸ್ಟರ್‌ನ ಕನ್ನಡ ಐಚ್ಛಿಕ ವಿದ್ಯಾರ್ಥಿಗಳಿಗೆ)

**ಅಂಕಗಳು : 50** **ಬೋಧನಾ ಅವಧಿ– 02 ವಾರಕ್ಕೆ**

ಘಟಕ–01: ಕನ್ನಡ ಭಾಷೆಯ ಜಾಯಮಾನ

ಘಟಕ–02: ಕನ್ನಡ ಧ್ವನಿಮಾ ವ್ಯವಸ್ಥೆ

ಘಟಕ–03: ವಾಣಿಜ್ಯ ಕನ್ನಡ

ಘಟಕ–04: ಕಂಪ್ಯೂಟರ್ ಕನ್ನಡ

ಘಟಕ–05: ಆಡಳಿತ ಕನ್ನಡ

### ಕನ್ನಡ ಐಚ್ಛಿಕ 5ನೇ ಸೆಮಿಸ್ಟರ್

**ಪತ್ರಿಕೆ–5** : ಕಾವ್ಯಮೀಮಾಂಸೆ : ಭಾರತೀಯ ಮತ್ತು ಪಾಶ್ಚಾತ್ಯ ತತ್ವಗಳು

**ಪತ್ರಿಕೆ–6** : ಹಳೆಗನ್ನಡ ಪಠ್ಯ (ಗದಾಯುದ್ಧ ಸಂಗ್ರಹ)

### ಕನ್ನಡ ಐಚ್ಛಿಕ 6ನೇ ಸೆಮಿಸ್ಟರ್

**ಪತ್ರಿಕೆ–7** : ಕನ್ನಡ ಭಾಷಾ ಚರಿತ್ರೆ–ಛಂದಸ್ಸು

**ಪತ್ರಿಕೆ–8** : ವಿಮರ್ಶೆ ತತ್ವಗಳು ಮತ್ತು ಆನ್ವಯಿಕತೆ

ಅಧ್ಯಕ್ಷರು
ಸ್ನಾತಕ ಕನ್ನಡ ಅಧ್ಯಯನ ಮಂಡಳಿ
ಕುವೆಂಪು ವಿಶ್ವವಿದ್ಯಾಲಯ

ಅಧ್ಯಕ್ಷರು
ಕನ್ನಡ ಭಾರತಿ
ಸ್ನಾತಕೋತ್ತರ ಅಧ್ಯಯನ ಮಂಡಳಿ